ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

# ಪತ್ರಿಕಾ ಪ್ರಕಟಣೆ

## ಸಾರ್ವಜನಿಕರ ಗಮನಕ್ಕಾಗಿ.

ಭಾರತ ಚುನಾವಣಾ ಆಯೋಗದ ನಿರ್ದೇಶನ ನಂ.3/4/ಐಡಿ/2019/ಎಸ್‌ಡಿಆರ್(ವಾಲ್ಯೂಮ್-1)
ದಿನಾಂಕ : 28/2/2019

ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಗಳು-2019 ರಲ್ಲಿ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ ನೀಡಲಾಗಿರುವ ಎಲ್ಲಾ ಮತದಾರರು ಮತದಾನದ ಅವಧಿಯಲ್ಲಿ ಮತದಾನ ಮಾಡುವ ಮುನ್ನ ತಮ್ಮನ್ನು ಗುರುತಿಸಿಕೊಳ್ಳಲು ಮತಗಟ್ಟೆಯಲ್ಲಿ ಕಡ್ಡಾಯವಾಗಿ ಎಪಿಕ್ (ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ) ಯನ್ನು ಹಾಜರುಪಡಿಸಬೇಕಾಗಿರುತ್ತದೆಯೆಂದು ಭಾರತ ಚುನಾವಣಾ ಆಯೋಗವು ಸೂಚನೆಗಳನ್ನು ನೀಡಿರುತ್ತದೆ.

ಎಪಿಕ್ (ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ) ಯನ್ನು ಹಾಜರುಪಡಿಸಲು ಸಾಧ್ಯವಾಗದ ಮತದಾರರು ಪರ್ಯಾಯವಾಗಿ ಈ ಕೆಳಗೆ ಸೂಚಿಸಲಾಗಿರುವ 11 ಪರ್ಯಾಯ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಮತದಾನ ಕೇಂದ್ರದಲ್ಲಿ ಹಾಜರುಪಡಿಸುವ ಮೂಲಕ ತಮ್ಮನ್ನು ಗುರ್ತಿಸಿಕೊಂಡು ಮತ ಚಲಾಯಿಸಬಹುದು. ಹಾಗೂ ದಾಖಲೆಗಳನ್ನು ಹಾಜರುಪಡಿಸುವುದನ್ನು ಕಡ್ಡಾಯ ಮಾಡಲಾಗಿರುತ್ತೆ.

ಹಿಂದಿನ ಸಂದರ್ಭಗಳಲ್ಲಿ ಭಾರತ ಚುನಾವಣಾ ಆಯೋಗವು ಮತದಾರರ ಗುರುತಿನ ಚೀಟಿಯನ್ನು ಮತದಾರರಿಗೆ ವಿತರಿಸಲು ಕ್ರಮ ಕೈಗೊಳ್ಳಲು ಸೂಚಿಸಿದ್ದು, ಪ್ರಸ್ತುತ ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ "ಮತದಾರರ ಗುರುತಿನ ಚೀಟಿ"ಯೊಂದನ್ನೇ ಮತದಾರರನ್ನು ಗುರುತಿಸಿಕೊಳ್ಳಲು ಬಳಸಬಹುದಾದ ದಾಖಲೆಯೆಂದು ಪರಿಗಣಿಸುವಂತಿಲ್ಲವೆಂದು ಸೂಚನೆಗಳನ್ನು ನೀಡಿದ್ದು, ಈ ಬಾರಿ ಕಡ್ಡಾಯವಾಗಿ ಮತದಾರರ ಗುರುತಿನ ಚೀಟಿಯೊಂದಿಗೆ ಕಡ್ಡಾಯವಾಗಿ ಎಪಿಕ್ (ಮತದಾರರ ಗುರುತಿನ ಚೀಟಿ) ಅಥವಾ ಈ ಕೆಳಗೆ ನಮೂದಿಸಿರುವ ಯಾವುದಾದರೂ ಪರ್ಯಾಯ ಗುರುತಿನ ದಾಖಲೆಯನ್ನು ಹಾಜರುಪಡಿಸಬೇಕಾಗಿರುತ್ತದೆ.

### (EPIC)ಮತದಾರರ ಗುರುತಿನ ಚೀಟಿಗೆ ಪರ್ಯಾಯವಾಗಿರುವ ಇತರೆ ದಾಖಲೆಗಳು

1. ಪಾಸ್‌ಪೋರ್ಟ್.
2. ಡ್ರೈವಿಂಗ್ ಲೈಸೆನ್ಸ್.
3. ರಾಜ್ಯ/ಕೇಂದ್ರ ಸರ್ಕಾರ/ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ನೀಡಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ.
4. ಬ್ಯಾಂಕ್/ಅಂಚೆ ಕಛೇರಿ ನೀಡಿರುವ ಭಾವಚಿತ್ರವಿರುವ ಪಾಸ್ ಬುಕ್.
5. ಪಾನ್ ಕಾರ್ಡ್ (PAN CARD)
6. ರಾಷ್ಟ್ರೀಯ ಜನಸಂಖ್ಯೆ ವಹಿ (ಎನ್.ಪಿ.ಆರ್.) ಯೋಜನೆಯಡಿ ಅರ್‌ಜಿಐ ರವರಿಂದ ನೀಡಿರುವ ಭಾವಚಿತ್ರವಿರುವ ಸ್ಮಾರ್ಟ್ ಕಾರ್ಡ್.
7. ಎಂ.ಎನ್.ಆರ್.ಇ.ಜಿ.ಎ ಯೋಜನೆ ಅಡಿಯಲ್ಲಿ ನೀಡಿರುವ ಭಾವಚಿತ್ರವಿರುವ ಜಾಬ್ ಕಾರ್ಡ್.
8. ಕಾರ್ಮಿಕ ಮಂತ್ರಾಲಯದಿಂದ ನೀಡಿರುವ ಭಾವಚಿತ್ರವಿರುವ ಆರೋಗ್ಯ ವಿಮಾ ಯೋಜನೆ ಸ್ಮಾರ್ಟ್ ಕಾರ್ಡ್.
9. ಭಾವಚಿತ್ರವುಳ್ಳ ಪಿಂಚಣಿ ದಾಖಲೆ.
10. ಲೋಕಸಭಾ ಸದಸ್ಯರು/ವಿಧಾನಸಭಾ ಸದಸ್ಯರು/ವಿಧಾನಪರಿಷತ್ ಸದಸ್ಯರಿಗೆ ನೀಡಿರುವ ಅಧಿಕೃತ ಗುರ್ತಿನ ಚೀಟಿ ಮತ್ತು
11. ಅಧಾರ್ ಕಾರ್ಡ್.

ಸ್ಥಳ : ಕೋಲಾರ
ದಿನಾಂಕ : 5/3/2019

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ಚುನಾವಣಾಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ.